# ಕಲಾತ್ಮಕ ಕನ್ನಡಿ

ಕಲಾವಿದನ ಕೈಗೆ ಯಾವುದೇ ವಸ್ತು ಸಿಕ್ಕರೆ ಸಾಕು. ಕಣ್ಣುಮುಚ್ಚಿ ಬಿಡುವುದರಲ್ಲಿ ಆ ವಸ್ತುವಿಗೆ ಒಂದು ಸುಂದರವಾದ ರೂಪವನ್ನು ನೀಡುತ್ತಾರೆ ಎಂಬುದಕ್ಕೆ ಈ ಕನ್ನಡಿ ಸಾಕ್ಷಿ. ಸಾಗರ ತಾಲ್ಲೂಕಿನ ಉಪ್ಪಳ್ಳಿ ಗ್ರಾಮದ ಅಂಜಲಿ. ಪಿ. ರಾವ್ ಅಂದವಾದ ಪ್ಲಾಸ್ಟಿಕ್ ಚಮಚಗಳನ್ನು ಬಳಸಿ ಕನ್ನಡಿಯ ಸುತ್ತ ಅಲಂಕಾರ ಮಾಡಿದ್ದಾರೆ. ಇದು ನೋಡುಗರ ಮನ ಸೆಳೆಯುವುದರಲ್ಲಿ ಸಂಶಯವಿಲ್ಲ.

**-ವಿ.ಸಿ. ಪಾಟೀಲ, ಸಾಗರ**





# ಬಂಡಿಗಳ ಮೆರವಣಿಗೆ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣದ ಗ್ರಾಮ ದೇವತೆಯಾದ ಶ್ರೀ ಕುಕ್ಕು ವಾಡೇಶ್ವರಿ ಜಾತ್ರಾ ಮಹೋತ್ಸವದಂದು 3. ಕಿ.ಮೀ. ದೂರದ ಮಂದಿರಕ್ಕೆ ಊರಿನವರೆಲ್ಲರೂ ಎತ್ತಿನ ಬಂಡಿಯಲ್ಲಿ ಹೋಗುತ್ತಾರೆ. ಅನಾದಿ ಕಾಲದಿಂದಲೂ ಈ ಪದ್ಧತಿಯಿದ್ದು ಆಧುನಿಕತೆಯ ಜೊತೆ ವಾಹನಗಳು ಎಷ್ಟೇ ಇದ್ದರೂ ಬಂಡಿಯಲ್ಲಿ ಹೋಗುವ ಸಂಪ್ರದಾಯ ಪಾಲಿಸುತ್ತಾರೆ. ಆಕರ್ಷಕವಾಗಿ ಸಿಂಗರಿಸಿದ ಎತ್ತು–ಬಂಡಿಗಳಲ್ಲಿ ಮನೆಯವರು, ನೆಂಟರು, ಸ್ನೇಹಿತರು, ಶ್ರೀಮಂತರು, ಬಡವರು ಎಲ್ಲರೂ ಹೋಗುತ್ತಾರೆ. ನೂರಾರು ಗಾಡಿಗಳ ಮೆರವಣಿಗೆ ನಿಜಕ್ಕೂ ನೋಡಲು ಬಲು ಸೊಗಸಾಗಿರುತ್ತದೆ. ಆದರೆ ಈ ಮೆರವಣಿಗೆ ವರ್ಷಕ್ಕೊಮ್ಮೆ ಜಾತ್ರೆ ದಿವಸ ಮಾತ್ರ.

**-ಡಾ.ಕೆ.ವಿ. ಸಂತೋಷ್ ಹೊಳಲ್ಕೆರೆ**



# ಗಜಮುಖನ ಬೃಹತ್ ದೇಗುಲ

ಮಹಾರಾಷ್ಟ್ರ ರಾಜ್ಯದ ಮೀರಜ್ ಹತ್ತಿರ ಸಾಯಿರಾಮನಗರ ಗಣೇಶ ಮಂದಿರಕ್ಕೆ ಪ್ರಸಿದ್ಧಿಯಾದ ಸ್ಥಳ. ಮೀರಜ್– ಕೊಲ್ಲಾಪುರ ಮಾರ್ಗ ಮಧ್ಯದಲ್ಲಿ ಸಾಯಿರಾಮನಗರದ ಗಣೇಶ ಮುಖದ ದೇವಾಲಯ ಅದ್ಭುತವಾಗಿದೆ. ಹೊರ ಆವರಣದ ಎಂಟು ದಿಕ್ಕಿನಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದ್ದು, ಒಳ ಆವರಣದಲ್ಲಿರುವ ಗಣೇಶ ಮೂರ್ತಿಯನ್ನು ಪೂಜಿಸುತ್ತಾರೆ. ದೇವಾಲಯದ ಹೊರಗೆ ಬೃಹತ್ ಇಲಿ, ಆನೆ ಉದ್ಯಾನವಿದೆ. ಈ ಸ್ಥಳ ಪ್ರವಾಸಿಗರಿಗೆ ಖುಷಿ ನೀಡುವುದರಲ್ಲಿ ಸಂದೇಹವಿಲ್ಲ.

**-ಶ್ರೀಧರ ರಾಯಸಂ, ಬೆಂಗಳೂರು**